ಅಸಲು ದಾವಾ ಸಂಖ್ಯೆ- 314/2018
ಪಿಡಬ್ಲ್ಯೂ- 01
ದಿನಾಂಕಃ 02.06.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ಎನ್ ಎಸ್ ಪಿ ವಕೀಲರಿಂದ

ಈ ದಾವೆಯನ್ನು ನಾನು ನಮ್ಮ ಜಮೀನನ್ನು ನನಗೆ ಬಿಟ್ಟು ಕೊಡಬೇಕು ಅಂತಾ ಹೂಡಿರುತ್ತೇನೆ. ಈ ದಾವಾ ಹೂಡುವ ಪೂರ್ವದಲ್ಲಿ ಪ್ರತಿವಾದಿಯರಿಗೆ ಜಮೀನು ಬಿಟ್ಟು ಕೊಡಬೇಕು ಅಂತಾ ಕೇಳಿದ್ದೇನೆ. 2018 ರಲ್ಲಿ ಕೇಳಿರುತ್ತೇನೆ. 3 ನೇ ತಿಂಗಳಿನಲ್ಲಿ ಕೇಳಿರುತ್ತೇನೆ. ಸರ್ವೆ ನಂ.339/ಬಿ ನನ್ನ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸರ್ವೆ ನಂಬರಿನಲ್ಲಿ ಪ್ರತಿವಾದಿಯರು ತಮ್ಮ ಹೆಸರನ್ನು ಹಚ್ಚಿಕೊಂಡಿರುತ್ತಾರೆ ಅಂತಾ ಸ್ವತಃ ನುಡಿಯುತ್ತಾರೆ. ಸರ್ವೆ ನಂ.339 ಎ ಮತ್ತು ಬಿ ಅಂತಾ ಎರಡು ಹಿಸ್ಸೆಗಳು ಇರುತ್ತವೆ ಎಂದರೆ ಸರಿ. ಸದರಿ ಸರ್ವೆ ನಂಬರುಗಳ ಪಹಣಿಗಳನ್ನು ಮೊದಲು 20 ವರ್ಷದ ಹಿಂದೆ ತೆಗೆಸಿದ್ದೆ. ಆಗ ಸದರಿ ಜಮೀನುಗಳು ನನ್ನ ಹೆಸರಿನಲ್ಲಿದ್ದವು. ಎರಡು ಆಸ್ತಿಗಳು 20 ವರ್ಷದ ಹಿಂದೆ ನನ್ನ ಹೆಸರಿನಲ್ಲಿದ್ದವು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆತನದ ಆಸ್ತಿಗಳ ಮತ್ತು ದಾವಾ ಆಸ್ತಿಗಳ ಕುರಿತು 40 ವರ್ಷದ ಹಿಂದೆ ಪಾಲುವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.339/2 ಬಿ ಜಮೀನಿಗೆ ನನ್ನ ಹೆಸರು ಹೇಗೆ ಬಂದಿರುತ್ತದೆ ಎಂದರೆ ನನ್ನ ತಂದೆ ಸದರಿ ಜಮೀನನ್ನು ನನ್ನ ಹೆಸರಿಗೆ ಮಾಡಿರುತ್ತಾನೆ. 1965 ರಲ್ಲಿ ನನ್ನ ತಂದೆ ನನ್ನ ಹೆಸರಿಗೆ ಜಮೀನು ಮಾಡಿರುತ್ತಾನೆ. ನಿಪಿ-5 ಕ್ಕೆ ತಹಶೀಲ್ದಾರ ಇವರ ಶೀಲು ಅಥವಾ ಸಹಿ ವಗೈರೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿ ಹಾಕಿ ಅದನ್ನು ತೆಗೆದುಕೊಂಡಿರುತ್ತೇನೆ. ಸದರಿ ದಾಖಲೆಯನ್ನು 20-30 ವರ್ಷದ ಹಿಂದೆ ಪಡೆದುಕೊಂಡಿರುತ್ತೇನೆ. 1967-68 ರಲ್ಲಿ ನಿಪಿ-4 ರ ಪ್ರಕಾರ ದಾವಾ ಆಸ್ತಿಯಲ್ಲಿ ನನ್ನ ಹೆಸರು ಕಡಿಮೆ ಮಾಡಿ ಕೋರ್ಟ ಆದೇಶದ ಪ್ರಕಾರ ನನ್ನ ತಾಯಿ ಮತ್ತು ನನ್ನ ಸಹೋದರರ ಹೆಸರು ದಾಖಲಾಗಿರುತ್ತದೆ ಎಂದರೆ ಅದನ್ನು ಅವರೇ ಮಾಡಿಕೊಂಡಿರುತ್ತಾರೆ. ನಾನು ನಿಪಿ-5 ದಾಖಲೆ ಸೃಷ್ಟಿ ಮಾಡಿದ್ದರಿಂದ ಅದನ್ನು ರದ್ದುಪಡಿಸಿ ನನ್ನ ತಾಯಿ ಮತ್ತು ಸಹೋದರರ ಹೆಸರುಗಳು ದಾವಾ ಆಸ್ತಿಯ ಪಹಣಿಯಲ್ಲಿ ಸೇರ್ಪಡೆಯಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸಬೇಕು ಅಂತಾ ಪ್ರತಿವಾದಿಯರಿಗೆ ಆಸ್ತಿ ಕೊಡಬಾರದು ಅಂತಾ ನಿಪಿ-5 ನ್ನು ಸೃಷ್ಟಿ ಮಾಡಿಕೊಂಡು ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.339/2 ಎ, 3 ಎಕರೆ 30 ಗುಂಟೆ ಇದು ಪಾಲು ವಾಟ್ನಿಯಲ್ಲಿ 1 ನೇ ಪ್ರತಿವಾದಿಯ ಪಾಲಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ.339/2 ಬಿ, 2 ಎಕರೆ 20 ಗುಂಟೆ ನನ್ನ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಎರಡು ಆಸ್ತಿಗಳು ನನ್ನದೇ ಇರುತ್ತವೆ. ಸದರಿ ಎರಡು ಜಮೀನುಗಳು ಪೋಡಿಯಾಗಿ ಬೇರೆ ಬೇರೆಯಾಗಿರುತ್ತವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾ ಆಸ್ತಿ ಸಂಖ್ಯೆ339/2 ಎ ವಿಸ್ತೀರ್ಣ

3 ಎಕರೆ 30 ಗುಂಟೆ ಜಮೀನಿನ ಪೈಕಿ ಪಶ್ಚಿಮ ಭಾಗದ 1 ಎಕರೆ 8 ಗುಂಟೆ ಜಮೀನನ್ನು 2 ನೇ ಪ್ರತಿವಾದಿಯ ತಂದೆಗೆ ಮಾರಾಟ ಮಾಡಿರುತ್ತಾನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಆಸ್ತಿಯನ್ನು ಆತ ಮಾರಿರುತ್ತಾನೆ ಎಂದು ನುಡಿಯುತ್ತಾರೆ. 1980 ರಲ್ಲಿ ಸದರಿ ದಾವಾ ಆಸ್ತಿಯನ್ನು ಮಾರಾಟ ಮಾಡುವಾಗ ಅದು 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿ ಖರೀದಿ ನಂತರ 2 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ 2 ನೇ ಪ್ರತಿವಾದಿಯ ತಂದೆ ತೀರಿಕೊಂಡಿದ್ದು, ಆ ಕಾರಣ ಸದರಿ ದಾವಾ ಆಸ್ತಿ 2 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಜಮೀನಿನ ವಿಸ್ತೀರ್ಣ 1 ಎಕರೆ 8 ಗುಂಟೆಯನ್ನು ಆಗಿನಿಂದ ಇಲ್ಲಿಯವರೆಗೂ 2 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಹೆಸರು ಸದರಿ ದಾವಾ ಆಸ್ತಿಯ ಪಹಣಿಗಳಲ್ಲಿ ದಾಖಲಾಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಕಬ್ಜೆಯಲ್ಲಿರುತ್ತೇನೆ ಅಂತಾ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಯಾವ ದಾಖಲೆ ಹಾಜರುಪಡಿಸಿರುತ್ತೀರಿ ಎಂದರೆ ಪಹಣಿ ಹಾಜರುಪಡಿಸಿದ್ದೇನೆ. ನಾನು 2 ಎಕರೆ ಜಮೀನಿನ ಮೇಲೆ ಸಾಲ ತೆಗೆದುಕೊಂಡಿಲ್ಲ. ನಾನು 2009-10 ರಲ್ಲಿ ಸದರಿ ನನ್ನ ಜಮೀನಿನ ಮೇಲೆ ಸಾಲ ತೆಗೆದುಕೊಂಡಿದ್ದರೂ ಸಹ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ದಾವಾ ಆಸ್ತಿ ವಿಸ್ತೀರ್ಣ 2 ಎಕರೆ 22 ಗುಂಟೆ ಜಮೀನಿನಲ್ಲಿ ಎಲೆಬಳ್ಳಿ ತೋಟ ಮಾಡಿರುತ್ತಾನೆ ಎನ್ನುವುದು ಸರಿಯಲ್ಲ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಅಂತಾ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಯರೇ ಕಬ್ಜೆಯಲ್ಲಿರುತ್ತಾರೆ ಎನ್ನುವುದು ಸರಿಯಲ್ಲ. ನಾನು ದಾವಾ ಆಸ್ತಿಗೆ ಮಾಲೀಕನಲ್ಲ ಮತ್ತು ಎಂದಿಗೂ ಕಬ್ಜೆಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದಪತ್ರದಲ್ಲಿ ದಾವಾ ಆಸ್ತಿಗೆ ತೋರಿಸಿದ ಚಕಬಂದಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ ದಾವೆ ಮಾಡಲು ಯಾವುದೇ ಕಾರಣ ಇಲ್ಲದಿದ್ದರೂ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.

Case called out, Plaintiff No.1 and counsel present. MSM files memo with 1 document. Plaintiff No.1 filed affidavit on oath she is examined as PW-1 exp-1 to 4 marked. Fully cross examined. MSM submits no further evidence. Hence side of plaintiff is closed. CSM submits no oral evidence of defendants. Hence side of defendants is closed. For plaintiff arguments on merits . Call on 16-10-2020

CJ and JMFC. Savanur

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.